**<u>ಸಾಕ್ಷಿಯನ್ನು ದಿನಾಂಕಃ 13-06-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀ ಸವಾಲುಃ 2ನೇ ಪ್ರತಿವಾದಿ ಪರ ವಕೀಲರವರಿಂದಃ</u>**

ನಾನು ಮೃತ 2ನೆ ಪ್ರತಿವಾದಿಯ ಗಿರಿಜಮ್ಮನನ್ನು ನೋಡಿದ್ದೇನೆ. ಆಕೆಯ ತಂದೆಯ ಹೆಸರು ನನಗೆ ಗೊತ್ತಿಲ್ಲ. ನಾನು ಮೃತ ಚಂದ್ರುಶೇಖರಯ್ಯ ಇವರನ್ನು ನೋಡಿದ್ದೇನೆ. ಅವರ ಹೆಂಡತಿಯ ಹೆಸರು ಗಿರಿಜಮ್ಮ. ಚಂದ್ರುಶೇಖರಯ್ಯನಿಗ ವೀರಬಸಯ್ಯ ಒಬ್ಬ ಮಗ ಇರುವನು. 3 ಜನ ಹೆಣ್ಣು ಮಕ್ಕಳು ಇರುವರು, ಅವರೆಂದರೆ ಬಾಗ್ಯಮ್ಮ, ಮಂಜಮ್ಮ ಮತ್ತು ಮೈತ್ರಮ್ಮ. ಆ ಮೂರು ಜನ ಹೆಣ್ಣುಮಕ್ಕಳು ಈಗ ಜೀವಂತ ಇರುವರು. ಪಾರ್ವತಮ್ಮ ವೀರಬಸಯ್ಯನ ಹೆಂಡತಿ ಅಂದರೆ ನನಗೆ ಗೊತ್ತಿಲ್ಲ. ನನಗೆ ಪಾರ್ವತಮ್ಮನ ಗಂಡನ ಹೆಸರು ಗೊತ್ತಿಲ್ಲ. 1ನೇ ವಾದಿ ವೀರಬಸಯ್ಯನ ಮಗಳು ಮತ್ತು 2 ನೇ ವಾದಿ ಪಾರ್ವತಮ್ಮ 1ನೇ ವಾದಿಯ ವೀರಬಸಯ್ಯನ ಮಗಳು ಅಂದರೆ ನನಗೆ ಗೊತ್ತಿಲ್ಲ. 2ನೇ ವಾದಿ ಹಾಗೂ 1ನೇ ಪ್ರತಿವಾದಿಯ ವಿವಾಹವು ದಿನಾಂಕ 28.10.1985 ರಂದು ಹರಿಹರದ ಹರಿಹರೇಶ್ವರ ದೇವಸ್ಥಾನದಲ್ಲಿ ನಡೆಯಿತು ಅಂದರೆ ನನಗೆ ಗೊತ್ತಿಲ್ಲ. ಆ ವಿವಾಹವು ದಿನಾಂಕ 28.10.1985 ರಂದು ಹರಪನಹಳ್ಳಿಯ ಉಪ ನೊಂದಣಿ ಕಚೇರಿಯಲ್ಲಿ ನೊಂದಣಿ ಆಗಿರುತ್ತದೆ ಅಂದರೆ ನನಗೆ ಗೊತ್ತಿಲ್ಲ. ಎಲ್ಲಾ ವಿಚಾರ ಗೊತಿದ್ದರೂ ಗೊತ್ತಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. OS 65/2013 ರಲ್ಲಿ ಇದ್ದ ಸರ್ವೆ ನಂ 75/ಜಿ ಮತ್ತು ಮನೆ ನಂ 10 ಮತ್ತು 11 ಇವು ಮೂಲತಃ ಪಂಚಾಕ್ಷರಯ್ಯ ಇವರಿಗೆ ಸೇರಿದ್ದು. ಪಂಚಾಕ್ಷರಯ್ಯ ಇವರು ಚಂದ್ರುಶೇಖರಯ್ಯನ ಅಣ್ಣ. ಮೂಲತಃ ದಾವಾ ಅಸ್ತಿಗಳು ಪಂಚಾಕ್ಷರಯ್ಯ ಇವರಿಗೆ ಸೇರಿದ್ದು ಎಂದು ತೋರಿಸಲು ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ದಾವಾ ಅಸ್ತಿಗಳು 1ನೇ ಪ್ರತಿವಾದಿಯಾದ ವೀರಬಸಯ್ಯನ ಪೂರ್ವಜರ ಅಸ್ತಿಗಳು ಅಂದರೆ ಸರಿಯಲ್ಲ. ಸದರಿ ವೀರಬಸಯ್ಯನಿಗೆ ದಾವಾ ಅಸ್ತಿಗಳನ್ನು ನಮಗೆ ಮಾರಾಟ ಮಾಡುವ ಯಾವುದೇ ಹಕ್ಕು ಇರಲಿಲ್ಲ ಅಂದರೆ ಸರಿಯಲ್ಲ. ದಾವಾ ಅಸ್ತಿಗಳು ಮೂಲತಃ ಚಂದ್ರುಶೇಖರಯ್ಯಇವರಿಗೆ ಸಂಬಂದಿಸಿದ ಆಸ್ತಿಗಳು ಅಂದರೆ ಸರಿ.

**ಸಾಕ್ಷಿಯ ಸಹಿ**

ಚಂದ್ರಶೇಖರಯ್ಯ ಇವರ ಅಸ್ತಿಯಾದ ಕಾರಣ ದಾವಾ ಅಸ್ತಿಗಳಲ್ಲಿ ಆತನ ಹೆಣ್ಣು ಮಕ್ಕಳಿಗೂ ಸಮಾನ ಹಿಸ್ಸೆ ಇರುವುದು ಅಂದರೆ ನನಗೆ ಗೊತ್ತಿಲ್ಲ ಆದರೆ ಮಾರಾಟ ಮಾಡುವಾಗ ಹೆಣ್ಣು ಮಕ್ಕಳು, ವೀರಬಸಯ್ಯ ಹಾಗೂ ಆತನ ತಾಯಿ ಎಲ್ಲರೂ ಇದ್ದರು. ನಾನು ಸಲ್ಲಿಸಿರುವ OS 65/2013 ರಲ್ಲಿ ಚಂದ್ರಶೇಖರಯ್ಯನ ಹೆಣ್ಣುಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಆ ದಾವೆಯಲ್ಲಿ ನಾವು ವೀರಬಸಯ್ಯನನ್ನು ಮತ್ತು ಗಿರಿಜಮ್ಮನನ್ನು ಮಾತ್ರ ಪಕ್ಷಗಾರರನ್ನಾಗಿ ಮಾಡಿದ್ದೇವೆ ಅಂದರೆ ಸರಿ. ಸದರಿ ದಾವೆಯಲ್ಲಿ ವಿಚಾರಣೆ ನಡೆದಿರುವುದಿಲ್ಲ ಅಂದರೆ ನಾವು ಅದನ್ನು ರಾಜಿಯಲಲ್ಲಿ ಮುಕ್ತಾಯ ಮಾಡಿಕೊಂಡಿರುತ್ತೇವೆ. ಚಂದ್ರಶೇಖರಯ್ಯ ನ ಹೆಣ್ಣುಮಕ್ಕಳಿಗೆ ಆಸ್ತಿಯಲ್ಲಿ ಪಾಲನ್ನು ತಪ್ಪಿಸುವ ಉದ್ದೇಶದಿಂದ ನಾನು, ಗಿರಿಜಮ್ಮ ಮತ್ತು ವೀರಬಸಯ್ಯ ಮಿಲಾಪಿಯಾಗಿ ಹೆಣ್ಣು ಮಕ್ಕಳ ವಿಚಾರವನ್ನು ಮರೆ ಮಾಚಿ ನ್ಯಾಯಾಲಯದಿಂದ ಸುಳ್ಳು ಡಿಕ್ರಿಯನ್ನು ಪಡೆದುಕೊಂಡಿದ್ದೇವೆ ಅಂದೆರ ಸರಿಯಲ್ಲ. ಆ ಡಿಕ್ರಿ ಚಂದ್ರಶೇಖರಯ್ಯನ ಹೆಣ್ಣು ಮಕ್ಕಳಿಗೆ ಯಾವುದೇ ರೀತಿಯಲ್ಲಿ ಬಂದನಕಾರ್ಯ ಆಗುವುದಿಲ್ಲ ಅಂದರೆ ನನಗೆ ಗೊತ್ತಿಲ್ಲ.

**ಮರು ವಿಚಾರಣೆ ಇಲ್ಲ**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

13-06-2025

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ.**

**ಸಾಕ್ಷಿಯ ಸಹಿ**